ಅ) ಹಾಗಿದ್ದಲ್ಲಿ ಈ ಕಾಮಗಾರಿಗಳನ್ನು ಎಷ್ಟು ದಿವಸದಲ್ಲಿ ಸರ್ಕಾರ ತೆಗೆದುಕೊಳ್ಳುತ್ತದೆ?

ಇ) ಈ ವರ್ಷದ ಅನುದಾನವನ್ನು ಹೆಚ್ಚಿಸಲು ಸರ್ಕಾರ ಯೋಚಿಸುವುದೆ?

ಶ್ರೀ ಧರಮ್ ಸಿಂಗ್ (ಲೋಕೋಪಯೋಗಿ ಸಚಿವರು) :

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿರುವ 4 ಕಿ.ಮೀ. ಉದ್ದದ ರಸ್ತೆಯು ಹಾಗೂ 5 ಕಲ್‌ವರ್ಟ್‌ಗಳು (ಸಣ್ಣ ಮೋರಿಗಳು) ಈ ಬಾರಿ ಬಿದ್ದ ಅತೀ ಹೆಚ್ಚಿನ ಮಳೆಯಂದಾಗಿ ತೀವ್ರ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಮೇಲೆ ತಿಳಿಸಿದಂತೆ ಈ ಇಲಾಖೆಯ ವ್ಯಾಪ್ತಿಯಲ್ಲಿನ ಹಾಳಾಗಿರುವ ರಸ್ತೆ ಮತ್ತು ಸಣ್ಣ ಅಡ್ಡ ಮೋರಿಗಳನ್ನು ದುರಸ್ತಿಗೊಳಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದ್ದು ಇವುಗಳನ್ನು ತ್ವರಿತವಾಗಿ ಪೂರ್ಣಗೊಳಿಸಲಾಗುವುದು.

ಇ) ಈ ಸಾಲಿನಲ್ಲಿ ರಸ್ತೆಗಳ ನಿರ್ವಹಣೆಗೆ ರೂ.21.64 ಲಕ್ಷ ಅನುದಾನವಿದ್ದು ರೂ.12.07 ಲಕ್ಷಗಳನ್ನು ವೆಚ್ಚ ಮಾಡಿದೆ. ಅನುದಾನ ಹೆಚ್ಚಿಸುವುದನ್ನು ಪರಿಶೀಲಿಸಲಾಗುವುದು.

ತುರುವೇಕೆರೆ ಪಟ್ಟಣದಲ್ಲಿ ಸರ್ಕಾರಿ ಐ.ಟಿ.ಐ. ಕಾಲೇಜು ಪ್ರಾರಂಭ

4968 - ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) : ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ಪಟ್ಟಣದಲ್ಲಿ ಐ.ಟಿ.ಐ. ಕಾಲೇಜು ಪ್ರಾರಂಭ ಮಾಡುವ ಯೋಚನೆ ಸರ್ಕಾರಕ್ಕೆ ಇದೆಯೇ?

ಆ) ಹಾಗಿದ್ದಲ್ಲಿ ಎಂದು ಪ್ರಾರಂಭ ಮಾಡಲಾಗುವುದು?

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು) :

ಅ) ಹೌದು.

ಆ) ವಿವರಗಳನ್ನು ಸಿದ್ಧಪಡಿಸಲಾಗುತ್ತಿದ್ದು, ವಿವರಗಳು ಸಿದ್ಧವಾದ ನಂತರ ಆದೇಶ ಹೊರಡಿಸಲಾಗುತ್ತದೆ.

ಬಯಲು ಸೀಮೆ ಅಭಿವೃದ್ಧಿ ಮಂಡಳಿ

4969 - ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ತುರುವೇಕೆರೆ) : ಮಾನ್ಯ ಮೀನುಗಾರಿಕೆ, ಬಂದರು ಹಾಗೂ ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಯಲು ಸೀಮೆ ಅಭಿವೃದ್ಧಿ ಯೋಜನೆಗೆ ಈ ಸಾಲಿನಲ್ಲಿ ನೀಡಿರುವ ಅನುದಾನ ಎಷ್ಟು?

ಆ) ಈ ಹಿಂದಿನ ಸಾಲಿನಲ್ಲಿ ಮಂಜೂರು ಮಾಡಲಾಗಿರುವ ಕಾಮಗಾರಿಗಳಿಗೆ ಹಣ

ಬಿಡುಗಡೆ ಮಾಡಲಾಗಿದೆಯೇ?

ಇ) ಆಗಿದ್ದರೆ ಎಷ್ಟು ತಿಂಗಳಲ್ಲಿ ಮಾಡಲಾಗುವುದು ರಾಜ್ಯದಲ್ಲಿ ಈ ರೀತಿ ಕಾಮಗಾರಿಗಳಿಗೆ ನೀಡಬೇಕಾಗಿರುವ ಹಣ ಎಷ್ಟು?

ಈ) 2000-2001ನೇ ಸಾಲಿನಲ್ಲಿ ಹೊಸದಾಗಿ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆಯೇ? ಹಾಗಿದ್ದಲ್ಲಿ ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದೆಯೇ? ಹಣ ಲಭ್ಯತೆ ಇದೆಯೇ?

ಶ್ರೀ ಬಿ. ರಮಾನಾಥ್ ರೈ (ಮೀನುಗಾರಿಕೆ, ಬಂದರು ಹಾಗೂ ಪ್ರದೇಶಾಭಿವೃದ್ಧಿ ಸಚಿವರು) :

ಅ) ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ 2000-2001ನೇ ಸಾಲಿಗೆ ರೂ. 900.00 ಲಕ್ಷಗಳನ್ನು ಅನುದಾನ ನಿಗಧಿ ಪಡಿಸಲಾಗಿದೆ.

ಆ) ಹೌದು.

ಇ) 1999-2000ನೇ ಸಾಲಿನಲ್ಲಿ ಕ್ರಿಯಾ ಯೋಜನೆಯಲ್ಲಿ ಅನುಮೋದಿಸಲ್ಪಟ್ಟ ಕಾಮಗಾರಿಗಳನ್ನು 2000-01ನೇ ಸಾಲಿನಲ್ಲಿ ಮುಂದುವರಿದ ಕಾಮಗಾರಿಗಳನ್ನಾಗಿ ಪರಿಗಣಿಸಿ ಅನುಷ್ಠಾನಗೊಳಿಸುವ ಸಲುವಾಗಿ ಮಂಡಳಿಯು ರೂ. 825.00 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಸರ್ಕಾರವನ್ನು ಕೋರಿದ್ದು, ಈ ಪೈಕಿ ಈಗಾಗಲೇ ರೂ. 20.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಉಳಿದ ಅನುದಾನವನ್ನು ಬಿಡುಗಡೆ ಮಾಡುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಇಲ್ಲ.

ರಾಜ್ಯದಲ್ಲಿರುವ ಅರಣ್ಯಗಳ ಸಿಬ್ಬಂದಿಗಳು (ಗಾರ್ಡ್)

4971 - ಶ್ರೀ ನಾರಾಯಣ ಸ್ವಾಮಿ ಎ. (ಆನೇಕಲ್) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಅರಣ್ಯ ಪ್ರದೇಶ ಎಷ್ಟು? ಜಿಲ್ಲಾವಾರು ಮಾಹಿತಿ ನೀಡುವುದು?

ಆ) ಈ ಅರಣ್ಯ ಪ್ರದೇಶವನ್ನು ಕಾಯಲು ಎಷ್ಟು ಗಾರ್ಡ್‌ಗಳ ಅವಶ್ಯಕತೆ ಇದೆ? (ಜಿಲ್ಲಾವಾರು ವಿವರ)

ಇ) ಈಗ ಹಾಲಿ ಕಾಯನಿರ್ವಹಿಸುತ್ತಿರುವ ಗಾರ್ಡ್‌ಗಳ ಸಂಖ್ಯೆ ಎಷ್ಟು?

ಈ) ಅಗತ್ಯವಿರುವ ಗಾರ್ಡ್‌ಗಳನ್ನು ಯಾವಾಗ ನೇಮಕಾತಿ ಮಾಡಿಕೊಳ್ಳಲಾಗುವುದು?

ಉ) ಈಗಾಗಲೇ ದಿನಗೂಲಿ ಮೇಲೆ 10-15 ವರ್ಷಗಳಿಂದ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಮಿಕರ ಹುದ್ದೆಗಳು ಎಷ್ಟು?

ಊ) ಇವರನ್ನು ಖಾಯಂಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?